## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1008 |
| ಸದಸ್ಯರ ಹೆಸರು | : | ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22.09.2022. |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ರಚಿತವಾದ ಮೂರು ಹಂತದ ಜಿಲ್ಲಾ/ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಪೈಕಿ ಗ್ರಾಮ ಪಂಚಾಯಿತಿ ಸಿಬ್ಬಂದಿಗಳನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಲ್ಲಿ ಸಕ್ರಮಗೊಂಡ ಸಿಬ್ಬಂದಿಗಳನ್ನು ಸ್ಥಳೀಯ ಸಂಸ್ಥೆಯ ನೌಕರರೆಂದು ಪರಿಗಣಿಸಿ ಅವರುಗಳು ಬಡ್ತಿಯಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗ್ರಾಮ ಪಂಚಾಯತಿ ನೌಕರರು ಸರ್ಕಾರಿ ನೌಕರರಾಗಿರುವುದಿಲ್ಲ.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 2(21) ರಂತೆ ಗ್ರಾಮ ಪಂಚಾಯತಿಯು ಸ್ಥಳೀಯ ಪ್ರಾಧಿಕಾರವಾಗಿದ್ದು, ಪ್ರಕರಣ 112 ರಡಿ ಸರ್ಕಾರವು ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ನಿಗಧಿಪಡಿಸಿದ್ದು, ಮಂಜೂರಾದ ಹುದ್ದೆಗಳಿಗೆ ಗ್ರಾಮ ಪಂಚಾಯತಿಯು ಪ್ರಕರಣ 113 ರಂತೆ ನೇಮಕಾತಿ ಮಾಡಿಕೊಂಡು, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆದುಕೊಂಡು ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಸ್ಥಳೀಯ ಸಂಸ್ಥೆಯಾದ ಗ್ರಾಮ ಪಂಚಾಯತಿಯ ಖಾಯಂ ನೌಕರರಾಗಿರುತ್ತಾರೆ.<br><br>ರಾಜ್ಯದ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ವೃಂದಗಳಿಗೆ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು ಮತ್ತು ಮಂಡಲ ಪಂಚಾಯತಿಗಳು ಹಾಗೂ ನ್ಯಾಯ ಪಂಚಾಯತ್ ಸಮಿತಿಗಳ ಅಧಿನಿಯಮ, 1983 (1985 ರ ಕರ್ನಾಟಕ ಅಧಿನಿಯಮ– 20) ರಡಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ ಸರ್ಕಾರದ ಆದೇಶ ಸಂಖ್ಯೆ: RDP 83 PBV 88, ದಿನಾಂಕ:28.10.1988 ರ ಆದೇಶದಲ್ಲಿ ಪ್ರಕಟಿಸಲಾಗಿರುತ್ತದೆ.<br><br>ಸದರಿ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಸರ್ಕಾರದ ಪತ್ರ ಸಂಖ್ಯೆ: RDP 83 PBV 88, ದಿನಾಂಕ:05.12.1988 ಹಾಗೂ ದಿನಾಂಕ:20.05.1989 ಗಳಲ್ಲಿ ನೀಡಿದ ಸೂಚನೆಗಳನ್ವಯ ಹಿಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಹಾಗೂ ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆಗಳು (DRDA) ಗಳಲ್ಲಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ನೌಕರರ ಸೇವೆಯನ್ನು ಅಂದಿನ ಜಿಲ್ಲಾ ಪರಿಷತ್‌ಗಳಲ್ಲಿ ವಿಲೀನಗೊಳಿಸಲಾಗಿರುತ್ತದೆ. ದಿನಾಂಕ:28.10.1988 ರಂದು ಪ್ರಕಟಿಸಲಾದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಲಿಪಿಕ |

| | | |
|---|---|---|
| | | ವೃಂದದ ನೌಕರರಿಗೆ ಮುಂಬಡ್ತಿ ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ನ್ನು ದಿನಾಂಕ: 10.05.1993 ರಂದು ಜಾರಿಗೆ ತರಲಾಗಿದ್ದು, ಮೇಲೆ ಹೇಳಿದ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ವೃಂದಗಳಿಗೆ ಕರ್ನಾಟಕ ಜಿಲ್ಲಾ ಪರಿಷತ್‌ಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು ಮತ್ತು ಮಂಡಲ ಪಂಚಾಯತಿಗಳು ಹಾಗೂ ನ್ಯಾಯ ಪಂಚಾಯತ್ ಸಮಿತಿಗಳ ಅಧಿನಿಯಮ 1983 ನ್ನು ನಿರಸನಗೊಳಿಸಲಾಗಿರುತ್ತದೆ. ಸದರಿ ಅಧಿನಿಯಮದ ಪ್ರಕರಣ 318 ರಡಿ ನಿರಸನ ಮತ್ತು ಉಳಿಸುವಿಕೆಯ ಅವಕಾಶಗಳನ್ವಯ ದಿನಾಂಕ: 28.10.1988 ರಂದು ಪ್ರಕಟಗೊಂಡ ವೃಂದ ಮತ್ತು ನೇಮಕಾತಿ ನಿಯಮಗಳು ಮುಂದುವರೆಸಲಾಗಿದ್ದು, ಸದರಿ ನಿಯಮಗಳಲ್ಲಿನ ಅವಕಾಶಗಳಂತೆ ಅರ್ಹ ನೌಕರರಿಗೆ ಮುಂಬಡ್ತಿಗಳನ್ನು ಮುಂದುವರೆಸುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 157 ಕೆಎಸ್‌ಎಸ್2007, ದಿನಾಂಕ:21.09.2007 ರಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿದೆ.<br><br>ಕಾಲ ಕ್ರಮೇಣ ಜಿಲ್ಲಾ ಪಂಚಾಯತಿಗಳ ಕಾರ್ಯ ಸ್ವರೂಪ ಬದಲಾಗುತ್ತಿದ್ದಂತೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ವೃಂದಗಳಿಗೆ ಸೀಮಿತಗೊಳಿಸಿ ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು 2020 ರಚಿಸಿ ದಿನಾಂಕ:20.07.2021ರ ಅಧಿಸೂಚನೆ ಸಂಖ್ಯೆ: ಗ್ರಾಅಪ 142 ಕೆಎಸ್‌ಎಸ್ 2016 ರಲ್ಲಿ ಪ್ರಕಟಗೊಂಡಿರುತ್ತದೆ. ಸದರಿ ನಿಯಮಗಳಲ್ಲಿ ಜಿಲ್ಲಾ ಪಂಚಾಯತಿಗಳಲ್ಲಿ ಮಂಜೂರಾಗಿರುವ ಗ್ರೂಪ್-ಡಿ ಹುದ್ದೆಗಳು, ದ್ವಿ.ದ.ಸ, ಪ್ರ.ದ.ಸ ಮತ್ತು ಅಧೀಕ್ಷಕ ವೃಂದಗಳಿಗೆ ಮತ್ತು ಬೆರಳಚ್ಚುಗಾರರಿಂದ ಶೀಘ್ರ ಲಿಪಿಗಾರರ ವೃಂದಕ್ಕೆ ಮುಂಬಡ್ತಿ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 79 ಕೆಎಸ್‌ಎಸ್ 2022 (ಇ) ರಲ್ಲಿ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೇಮಕಾತಿ ಪ್ರಾಧಿಕಾರವೆಂದು ನಿರ್ದಿಷ್ಟಪಡಿಸಿ ಆದೇಶಿಸಲಾಗಿದ್ದು, ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿ ಅರ್ಹ ನೌಕರರಿಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ. |
| (ಆ) | ಜಿಲ್ಲಾ/ತಾಲ್ಲೂಕು ಪಂಚಾಯಿತಿಗಳಲ್ಲಿ ಸಕ್ರಮಗೊಂಡ ಕೆಲವು ನೌಕರರನ್ನು ಗ್ರಾಮ ಪಂಚಾಯಿತಿಗಳಿಗೆ ಗ್ರೇಡ್-2/ಗ್ರೇಡ್-1 ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಿ, ಉಳಿದ ನೌಕರರನ್ನು ಜಿಲ್ಲಾ | ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು, 2008 ರಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಾದ ಬಿಲ್ ಕಲೆಕ್ಟರ್‌ಗಳು/ ಲೆಕ್ಕಿಗರು/ ಗುಮಾಸ್ತರು/ ಬೆರಳಚ್ಚುಗಾರರು/ ಗುಮಾಸ್ತ ಕಂ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳಿಗೆ |

| | | |
|---|---|---|
| | ಪಂಚಾಯಿತಿಯಲ್ಲಿಯೇ ಮುಂದುವರಿಸಿರುವ ಕಾರಣ ಗ್ರಾಮ ಪಂಚಾಯಿತಿಗಳಿಗೆ ನೇಮಕಗೊಂಡ ನೌಕರರು 2 ಅಥವಾ 3 ಬಡ್ತಿಗಳನ್ನು ಪಡೆದು ಕಾರ್ಯನಿರ್ವಾಹಕ ಅಧಿಕಾರಿ/ಉಪ ಕಾರ್ಯದರ್ಶಿ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾ ಪಂಚಾಯಿತಿಗೆ ನೇಮಕಗೊಂಡ ನೌಕರರು ಯಾವುದೇ ಬಡ್ತಿ ಪಡೆಯದೇ ಒಂದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ, ಬಡ್ತಿಯಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ತಾರತಮ್ಯ ಸರಿಪಡಿಸಲು ತೆಗೆದುಕೊಂಡ ಕ್ರಮಗಳೇನು; | ನೇಮಕಾತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಈ ನಿಯಮಗಳು ಪ್ರತ್ಯೇಕವಾಗಿದ್ದು, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಲ್ಲಿರುವ ಲಿಪಿಕ ವರ್ಗದ ನೌಕರರಿಗೆ ಅನ್ವಯಿಸಲು ಆಸ್ಪದವಿರುವುದಿಲ್ಲ. ಅಲ್ಲದೇ, ನಿಯಮಗಳು ಪ್ರತ್ಯೇಕವಾಗಿದ್ದರೂ ಸಹ ಆಯಾ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮುಂಬಡ್ತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. |
| (ಇ) | ವೃಂದ ಮತ್ತು ನೇಮಕಾತಿ ನಿಯಮಗಳನ್ನು ಗ್ರಾಮ ಪಂಚಾಯಿತಿಗಳಿಗೆ ಅನೇಕ ಬಾರಿ ತಿದ್ದುಪಡಿಗಳನ್ನು ಮಾಡುವ ಮೂಲಕ ಕನಿಷ್ಠ 3 ವರ್ಷಗಳ ಸೇವೆ ಸಲ್ಲಿಸಿರುವ ಸಿಬ್ಬಂದಿಗಳಿಗೆ ಬಡ್ತಿಗಳನ್ನು ನೀಡಲು ಅವಕಾಶ ಕಲ್ಪಿಸಿದ್ದು, ಜಿಲ್ಲಾ/ತಾಲ್ಲೂಕು ಪಂಚಾಯಿತಿ ಸಿಬ್ಬಂದಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು 2021 ರವರೆಗೆ ರಚಿಸದಿರಲು ಕಾರಣವೇನು? | ಕರ್ನಾಟಕ ಜಿಲ್ಲಾ ಪರಿಷತ್‌ಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು ಮತ್ತು ಮಂಡಲ ಪಂಚಾಯತಿಗಳು ಹಾಗೂ ನ್ಯಾಯ ಪಂಚಾಯತ್ ಸಮಿತಿಗಳ ಅಧಿನಿಯಮ 1983 (1985 ರ ಕರ್ನಾಟಕ ಅಧಿನಿಯಮ– 20) ರಡಿ ರಚಿಸಿದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿರಸನಗೊಳಿಸಿ ಕರ್ನಾಟಕ ಸಿವಿಲ್ ಸೇವಾ ಕಾಯ್ದೆಯಡಿ ಕರ್ನಾಟಕ ಸಾಮಾನ್ಯ ಸೇವೆ (ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು 2020 ರಚಿಸಿ ದಿನಾಂಕ:20.07.2021ರ ಅಧಿಸೂಚನೆ ಸಂಖ್ಯೆ: ಗ್ರಾಅಪ 142 ಕೆಎಸ್‌ಎಸ್ 2016 ರಲ್ಲಿ ಪ್ರಕಟಗೊಂಡಿರುತ್ತದೆ. ಈ ನಿಯಮಗಳನ್ನು ರಚಿಸಬೇಕಾದಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಅಂದರೆ ಸಿಆಸುಇ, ಆರ್ಥಿಕ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಯ ಸಮಾಲೋಚನೆಯೊಂದಿಗೆ ವಿವಿಧ ಹಂತಗಳಲ್ಲಿ ವೃಂದ ಪರಿಶೀಲನಾ ಉಪಸಮಿತಿ, ವೃಂದ ಪರಿಶೀಲನಾ ಸಮಿತಿಗಳ ಹಾಗೂ ಸಚಿವ ಸಂಪುಟದ ಅನುಮೋದನೆಯೊಂದಿಗೆ ಪ್ರಕಟಿಸಲಾಗಿರುತ್ತದೆ. |

ಸಂ. ಗ್ರಾಅಪ 309 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ